# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 285
ಸದಸ್ಯರ ಹೆಸರು : ಡಾ॥ ಜಯಮಾಲ ರಾಮಚಂದ್ರ
(ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 04-03-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಪ್ರಶ್ನೆ | | ಉತ್ತರ |
|---|---|---|
| (ಅ) | ಕಳೆದ 03 ವರ್ಷಗಳಿಂದ ಕರಾವಳಿ ಹಾಗೂ ಮಲೆನಾಡಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಅನಾವೃಷ್ಟಿ ಹಾಗೂ ಅತಿವೃಷ್ಟಿಯಿಂದ ಈ ಭಾಗದ ರೈತರು ಬೆಳೆದ ಬೆಳೆ ಕಳೆದುಕೊಂಡು ತತ್ತರಿಸಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಸದರಿ ಪ್ರದೇಶದ ರೈತರಿಗೆ ಆದಂತಹ ಹಾನಿ ತುಂಬುವ ನಿಟ್ಟಿನಲ್ಲಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ. | ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಉಂಟಾದ ಬೆಳೆಹಾನಿ ಪ್ರಕರಣಗಳಿಗೆ ಕೆಳಕಂಡ ದರದಲ್ಲಿ ಇನ್ಪುಟ್ ಸಬ್ಸಿಡಿ ಪಾವತಿಸಲಾಗಿದೆ.<br>ಮಳೆಯಾಶ್ರಿತ ಬೆಳೆ – ಪ್ರತಿ ಹೆಕ್ಟೇರ್ ಗೆ ರೂ.6,800/-<br>ನಿರಾವರಿ ಬೆಳೆ – ಪ್ರತಿ ಹೆಕ್ಟೇರ್ ಗೆ ರೂ.13,500/-<br>ಬಹುವಾರ್ಷಿಕ ಬೆಳೆ- ಪ್ರತಿ ಹೆಕ್ಟೇರ್ ಗೆ ರೂ.18,000/- |
| (ಇ) | ಕರಾವಳಿ ಹಾಗೂ ಮಲೆನಾಡಿನ ಸುತ್ತಮುತ್ತಲಿನ ಪ್ರದೇಶದ ರೈತರಿಗೆ ಆಗಿರುವ ಬೆಳೆ ಹಾನಿಗೆ ಬೆಳೆ ವಿಮೆ ಪಾವತಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ; ಇದ್ದಲ್ಲಿ, ಸರ್ಕಾರದ ಮುಂದಿನ ಕ್ರಮಗಳೇನು? | ನೆರೆಪೀಡಿತ ಪ್ರದೇಶಗಳಲ್ಲಿ ಹಾನಿಗೊಳಗಾದ ಬೆಳೆಗೆ ಕೃಷಿ ಇಲಾಖೆಯ ವತಿಯಿಂದ ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಪರಿಹಾರವನ್ನು ಒದಗಿಸಲು, PMFBY ಪರಿಷ್ಕೃತ ಮಾರ್ಗಸೂಚಿಯಲ್ಲಿ ಹವಾಮಾನ ವೈಪರಿತ್ಯದ ಸಂದರ್ಭದಲ್ಲಿ ಮಧ್ಯಂತರ ವಿಮಾ ಪರಿಹಾರ (on account payment due to mid season adversity) ದೊರಕಿಸಲು ಅವಕಾಶವಿರುತ್ತದೆ. ಆದರೆ, ಸದರಿ ಯೋಜನೆಯಡಿ ಕರಾವಳಿ ಹಾಗೂ ಮಲೆನಾಡು ಪ್ರದೇಶಗಳಲ್ಲಿ ಭತ್ತದ ಬೆಳೆಯನ್ನು ಮಾತ್ರ ಅಧಿಸೂಚಿಸಲಾಗಿದ್ದು, ಸದರಿ ಬೆಳೆಯು ನೀರು ನಿಲ್ಲಿಸಿ ಬೆಳೆಯುವ (ಹೈಡ್ರೋಫಿಲಿಕ್) ಬೆಳೆಯಾಗಿರುವುದರಿಂದ ಪರಿಷ್ಕೃತ PMFBY ಮಾರ್ಗಸೂಚಿಯನ್ವಯ ಮಧ್ಯಂತರ ವಿಮಾ ಪರಿಹಾರಕ್ಕೆ ಅವಕಾಶವಿರುವುದಿಲ್ಲ. |

ಕಂಇ 94 ಟಿಎನ್ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು